# ಸಿಎಂ ಕುರ್ಚಿಗೇರಿದ ಕಾಮಿಡಿಯನ್!

■ ಪ್ರವೀಣ ಕುಲಕರ್ಣಿ

ಒಂದು ಕಾಲಕ್ಕೆ ಕಾಮಿಡಿಯನ್ ಆಗಿ ಶ್ರೋತೃಗಳನ್ನು ರಂಜಿಸುತ್ತಿದ್ದ ವ್ಯಕ್ತಿ ಇದೀಗ ಪಂಜಾಬ್ ಜನರ ಮೊಗದಲ್ಲಿ ತೃಪ್ತಿಯ ನಗು ಅರಳಿಸಲು ಸೀದಾಹೋಗಿ ಮುಖ್ಯಮಂತ್ರಿ ಕುರ್ಚಿಯನ್ನೇ ಏರಿ ಕುಳಿತಿದ್ದಾರೆ. ಅವರೇ ಭಗವಂತ್ ಮಾನ್. ರಾಜಕೀಯಕ್ಕೆ ಧುಮುಕಿ ಕೇವಲ ಹತ್ತೇ ವರ್ಷಗಳಲ್ಲಿ ಹಳದಿ ಪೇಟಾಧಾರಿ ಮಾನ್ ಅವರು ಏರಿದ ಎತ್ತರ ಬೆರಗು ಮೂಡಿಸುವಂಥದ್ದು. ಅವರು ಎಬ್ಬಿಸಿದ ರಾಜಕೀಯ ಬಿರುಗಾಳಿಯಲ್ಲಿ ಕಾಂಗ್ರೆಸ್, ಶಿರೋಮಣಿ ಅಕಾಲಿ ದಳ, ಬಿಜೆಪಿಯಂತಹ ಪಕ್ಷಗಳೆಲ್ಲವೂ ಮಣ್ಣು ಮುಕ್ಕಿವೆ. ಹಾಗೆಯೇ ಮೂವರು ಮಾಜಿ ಮುಖ್ಯಮಂತ್ರಿಗಳು ಮಕಾಡೆ ಮಲಗಿದ್ದಾರೆ.

ಮುಖ್ಯಮಂತ್ರಿ ಹುದ್ದೆಗೆ ನಿಯೋಜನೆಯಾದ ಕೂಡಲೇ ಈ ಮಾಜಿ ಕಾಮಿಡಿಯನ್ ಹಲವು ಗಂಭೀರ ಬದಲಾವಣೆಗಳಿಗೆ ಕೈಹಾಕಿದ್ದಾರೆ. ವಿಐಪಿ ಸಂಸ್ಕೃತಿಗೆ ತಿಲಾಂಜಲಿಯನ್ನೂ ನೀಡಿದ್ದಾರೆ. ವಿಐಪಿಗಳಿಗೆ ನೀಡಿದ್ದ ಭದ್ರತೆಯನ್ನು ವಾಪಸ್ ಪಡೆದು, ಆ ಸಿಬ್ಬಂದಿಯನ್ನು ಜನರ ಸೇವೆಗೆ ಕಳಿಸಿದ್ದಾರೆ. ಸರ್ಕಾರಿ ಕಚೇರಿಗಳಲ್ಲಿ ಇನ್ನುಮುಂದೆ ಮುಖ್ಯಮಂತ್ರಿಯ ಭಾವಚಿತ್ರ ಬೇಡ ಎಂಬ ಆದೇಶವನ್ನೂ ಹೊರಡಿಸಿದ್ದಾರೆ. ರಾಜಭವನದ ಬದಲು ಪಂಜಾಬ್ ಜನರ ಪಾಲಿಗೆ ಆರಾಧ್ಯದೈವ ಎನಿಸಿದ ಭಗತ್ ಸಿಂಗ್ ಅವರ ಜನ್ಮಸ್ಥಳದಲ್ಲಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಮುಖ್ಯಮಂತ್ರಿಯಾಗಿ ಅವರು ಅಧಿಕಾರ ಸ್ವೀಕರಿಸುವ ಮುನ್ನ ಎರಡು ಬಾರಿ ಲೋಕಸಭಾ ಸದಸ್ಯರಾಗಿ, ರಾಜಕೀಯ ಅನುಭವ ಪಡೆದಿದ್ದಾರೆ.



ಸಂಗ್ರೂರ್ ಜಿಲ್ಲೆಯ ಸಾತೋಜ್ ಎಂಬ ಹಳ್ಳಿಯಲ್ಲಿ ಜನಿಸಿದ ಹಳ್ಳಿಹೈದ ಈ ಮಾನ್. ಶಾಲಾ ಮಾಸ್ತರರ ಮಗನಾಗಿ, ಅಪ್ಪನ ಸೈಕಲ್ ಹಿಂದೆ ಕುಳಿತು ಶಾಲೆಗೆ ಹೋಗುತ್ತಿದ್ದ ಭಗವಂತ್‌ಗೆ ಪಠ್ಯಕ್ಕಿಂತ ಪಠ್ಯೇತರ ಚಟುವಟಿಕೆಗಳಲ್ಲಿಯೇ ಹೆಚ್ಚು ಆಸಕ್ತಿ. ಊರಿನಲ್ಲಿ ಪರಿಚಿತರೆಲ್ಲರ ಹಾವಭಾವಗಳನ್ನು ಮಿಮಿಕ್ರಿ ಮಾಡಿ ತೋರಿಸುವ ಕೌಶಲ ಅವರಿಗೆ ಬಾಲ್ಯದಲ್ಲೇ ಸಿದ್ಧಿಸಿತ್ತು. ಮುಖ್ಯಶಿಕ್ಷಕರಾಗಿದ್ದ ತಂದೆಯೂ ಸೇರಿದಂತೆ, ಶಾಲಾ ಶಿಕ್ಷಕರು, ಸಹಪಾಠಿಗಳು, ಬಂಧುಗಳು, ನೆರೆಹೊರೆಯವರು ಎಲ್ಲರೂ ಮಾನ್ ಅವರ ಮಿಮಿಕ್ರಿ 'ದಾಳಿ'ಗೆ ಒಳಗಾದವರೇ. ಶಹೀದ್ ಉಧಮ್ ಸಿಂಗ್ ಸರ್ಕಾರಿ ಕಾಲೇಜಿನಲ್ಲಿ ಬಿ.ಕಾಂ ಪದವಿಗೆ ಪ್ರವೇಶ ಪಡೆದರೂ ಅವರು ಓದನ್ನು ಪೂರ್ಣಗೊಳಿಸಿದವರಲ್ಲ. ಆದರೆ, ಯುವಜನ ಮೇಳಗಳಲ್ಲಿ ಎಗ್ಗಿಲ್ಲದೆ ಭಾಗವಹಿಸುತ್ತಿದ್ದ ಮಾನ್, ತಮ್ಮ ಅಸಾಮಾನ್ಯ ಕಲೆಗಾರಿಕೆಯಿಂದ ಟ್ರೋಫಿ ಮೇಲೆ ಟ್ರೋಫಿಗಳನ್ನು ಹೊತ್ತು ತರುತ್ತಿದ್ದರು. ಕಾಲೇಜಿನಿಂದ ಹೊರಬಿದ್ದ ಮೇಲೆ ಸ್ಟ್ಯಾಂಡ್ ಅಪ್ ಕಾಮಿಡಿಯನ್ನೇ ತಮ್ಮ ವೃತ್ತಿ ಮಾಡಿಕೊಂಡರು. ಅವರ ಗಾಯನದ ಹಾಡುಗಳು ಸಹ ಜನಪ್ರಿಯವಾದವು. ಜುಗ್ನು ಮಸ್ತ್, ಕುಲ್ಫಿ ಗರ್ಮಾ ಗರಮ್ ಮೊದಲಾದ ಆಲ್ಬಂಗಳು ತುಂಬಾ ಬಿಸಿ ಬಿಸಿ ಮಸಾಲೆ ದೋಸೆಯಂತೆ ಖರ್ಚಾದವು.

ಕಾಮಿಡಿಯನ್ ಆಗಿ ಅವರು ವೃತ್ತಿ ಬದುಕಿನ ಉತ್ತುಂಗ ಕಂಡಿದ್ದು ಟಿ.ವಿ. ಚಾನೆಲ್ ಒಂದರಲ್ಲಿ ಬರುತ್ತಿದ್ದ 'ದಿ ಗ್ರೇಟ್ ಇಂಡಿಯನ್ ಲಾಫರ್ ಚಾಲೆಂಜ್'ನಲ್ಲಿ. ಆ ಶೋನಲ್ಲಿ ನವಜೋತ್ ಸಿಂಗ್ ಸಿಧು ಸಹ ಜಡ್ಜ್ ಆಗಿ ಆಗಾಗ ಕಾಣಿಸಿಕೊಳ್ಳುತ್ತಿದ್ದರು. ಆಗ ಮಾನ್ ಅವರ ಕೌಶಲ ಕಂಡು ಚಪ್ಪಾಳೆ ತಟ್ಟಿದ್ದ ಸಿಧು, ಈಗ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಆ ಸಾಧಕನ ಸಾಧನೆಯನ್ನು ಕಂಡು ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸ್ಥಾನದಿಂದಲೇ ಕೆಳಗಿಳಿದಿದ್ದಾರೆ!

ಮಾನ್ ಅವರು ಎಎಪಿ ಸೇರಿದ್ದು 2014ರಲ್ಲಿ. ಲೋಕಸಭಾ ಚುನಾವಣೆಯಲ್ಲಿ ಶಿರೋಮಣಿ ಅಕಾಲಿ ದಳದ 'ಹೆವಿವೇಟ್' ಸುಖ್‌ದೇವ್ ಸಿಂಗ್ ದಿಂಡ್ಸಾ ಅವರ ವಿರುದ್ಧವೇ ಸ್ಪರ್ಧಿಸಿ ಗೆದ್ದ ಅವರು, ಅಲ್ಲಿಂದ ಮತ್ತೆ ಹಿಂದಿರುಗಿ ನೋಡಲಿಲ್ಲ. ರಾಜಕೀಯವಾಗಿ ಮಾನ್ ಅವರೇನೋ ಬೆಳೆಯುತ್ತಾ ಸಾಗಿದರು. ಆದರೆ, ಕುಡಿತದ ಹವ್ಯಾಸ ಅವರನ್ನು ವಿವಾದದ ಬಲೆಗೆ ಕೆಡವಿಬಿಟ್ಟಿತು. ಎಎಪಿಯದೇ ಸಂಸದರಾದ ಹರ್ವಿಂದರ್ ಸಿಂಗ್ ಖಲ್ಸಾ ಅವರು, 'ಮಾನ್ ಕುಡಿದುಕೊಂಡೇ ಲೋಕಸಭೆಗೆ ಬರುತ್ತಾರೆ. ಅವರ ಪಕ್ಕ ಕೂರಲು ಆಗದು. ನನ್ನ ಆಸನವನ್ನು ಬದಲಿಸಬೇಕು' ಎಂದು ನೇರವಾಗಿ ಸ್ಪೀಕರ್‌ಗೆ ಮನವಿ ಮಾಡಿದ್ದರು. ರಾಜಕೀಯ ವಿರೋಧಿಗಳು ಮಾನ್ ಅವರಿಗೆ 'ಹುಟ್ಟಾ ಕುಡುಕ', 'ಪೆಗ್ವಂತ್ ಮಾನ್' ಎಂದು ಕುಹಕವಾಡಿದ್ದರು.

ಗುರುದ್ವಾರಕ್ಕಾಗಲಿ, ಅಂತ್ಯಸಂಸ್ಕಾರಕ್ಕಾಗಿ ಮಾನ್ ಕುಡಿದೇ ಬರುತ್ತಾರೆ ಎಂಬ ದೂರುಗಳು ವ್ಯಾಪಕವಾಗಿದ್ದವು. ಪ್ರಧಾನಿ ಮೋದಿ ಅವರು ಮಾನ್ ಕುಡಿತದ ಚಟದ ಕುರಿತು ಲೋಕಸಭೆಯಲ್ಲೇ ನಗೆ ಚಟಾಕಿಯನ್ನೂ ಹಾರಿಸಿದ್ದರು. ಆದರೆ, ಮಾನ್ ಅವರ ಅಭಿಮಾನಿಗಳು, 'ಪಂಜಾಬ್‌ನಲ್ಲಿ ಯಾರು ಕುಡಿಯುವುದಿಲ್ಲ ಹೇಳಿ' ಎಂದು ಮರುಪ್ರಶ್ನೆ ಹಾಕಿದ್ದರು. ಚುನಾವಣಾ ರ‍್ಯಾಲಿಯೊಂದರಲ್ಲಿ ತಮ್ಮ ಕುಡಿತದ ಚಟದ ಕುರಿತು ಮುಕ್ತವಾಗಿಯೇ ಒಪ್ಪಿಕೊಂಡಿದ್ದ ಮಾನ್, ಇನ್ನುಮುಂದೆ ಕುಡಿಯುವುದಿಲ್ಲ ಎಂದು ಜನರ ಮುಂದೆಯೇ ಶಪಥ ಮಾಡಿದ್ದರು. ಫ್ಯಾಮಿಲಿಗಿಂತ ನನಗೆ ಪಂಜಾಬ್ ಮುಖ್ಯ ಎಂದ ಮಾನ್, ಪತ್ನಿಯಿಂದಲೂ ದೂರವಾದವರು. ಈಗ ಪಂಜಾಬ್ ಅನ್ನೇ ತಮ್ಮ ಫ್ಯಾಮಿಲಿ ಎಂದು ಘೋಷಿಸಿ, ಜನರ ಏಳ್ಗೆಗಾಗಿ ದುಡಿಯುವ ಪಣ ತೊಟ್ಟಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65